## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

### ಸಿ ಸಿ ಸಂಃ 839/2019

| | | |
|---|---|---|
| ಸಾಕ್ಷಿಯ ಹೆಸರುಃ | ಡಾ.ಸದಾಶಿವ | ಫ್ರಾಸಾಃಃ 7 |
| ತಂದೆಯ ಹೆಸರುಃ | ಕೆ ಲಿಂಗಪ್ಪಾಜಿ | ಚಾಸಾಃಃ 7 |
| ವಯಸ್ಸುಃ | 59 ವರ್ಷ | ಪ್ರಮಾಣೀಕರಿಸಿದ<br>ದಿಃ 30.07.2025 |
| ಉದ್ಯೋಗಃ | ಫಿಜಿಷಿಯನ್, ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆ. | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

ನಾನು 2017 ರಿಂದಲೂ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪಿಜಿಷಿಯನ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 03.05.2018 ರಂದು ಬೆಳಗ್ಗೆ 10.20 ಗಂಟೆ ಸಮಯದಲ್ಲಿ ಚಾಸಾ-1 ವೇದ ಮೂರ್ತಿ ಎಂಬುವವರು, ಅದೇ ದಿನ ಬೆ 9.00 ಗಂಟೆಗೆ ಪಾಕನಾಡು ಕೊಪ್ಪಲು ಗ್ರಾಮದಲ್ಲಿ ವೀರಭದ್ರಪ್ಪ ಮತ್ತು ವಿರೇಂದ್ರ ಕುಮಾರ ರವರು ಕಲ್ಲಿನಿಂದ ಮತ್ತು ಮರದ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆಂದು ಅವರ ಪತ್ನಿ ಸಣ್ಣಮ್ಮ ರವರೊಂದಿಗೆ ಚಿಕಿತ್ಸೆಗೋಸ್ಕರ ನನ್ನ ಮುಂದೆ ಹಾಜರಾಗಿದ್ದರು. ಅವರನ್ನು ಪರೀಕ್ಷಿಸಲಾಗಿ ತಲೆಯ ಎಡಭಾಗದ ಹಿಂಭಾಗದಲ್ಲಿ 2 x 1 ಸೆಂ ಮೀ ಅಳತೆಯ ತರಚಿದ ಗಾಯವಾಗಿರುತ್ತದೆ ಮತ್ತು ಎಡ ಬೆನ್ನಿನ ಮೇಲ್ಬಾಗದಲ್ಲಿ 8 x 5 ಸೆಂ ಮೀ

ಅಳತಯ ಊತದ ಗಾಯವಾಗಿರುತ್ತದೆ. ಸದರಿ ಗಾಯಗಳು ಸಾದಾರಣ ಸ್ವರೂಪದ್ದಾಗಿರುತ್ತದೆ. ನಾನು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.7** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.7(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯ ದ ಮುಂದಿರುವ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದರೆ ನಿಪಿ-7 ರಲ್ಲಿ ಕಾಣಿಸಿರುವ ಗಾಯಗಳು ಆಗುವ ಸಂಭವ ಇರುತ್ತದೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ** ಎಸ್ ಎಂ ಪಿ **ವಕೀಲರಿಂದಃ**

3. ಮೇಲ್ಕಂಡ ಗಾಯಗಳು ಬೈಕಿನಲ್ಲಿ ಹೋಗುವಾಗ ಬಿದ್ದರೆ ಆಗುವಂತಹ ಸಾಧ್ಯತೆ ಇದೆ. ಪೋಲೀಸರ ಮಾತು ಕೇಳಿ ನಾನು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಕಲ್ಲು ಮತ್ತು ದೊಣ್ಣೆಯಿಂದ ಮೇಲ್ಕಂಡ ಗಾಯಗಳು ಆಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ-1 ನನ್ನ ಮುದೆ ಯಾವುದೇ ಹಲ್ಲೆ ಹಿನ್ನಲೆಯಲ್ಲಿಚಿಕಿತ್ಸೆಗೆಂದು ಹಾಜರಾಗಿರಲಿಲ್ಲ, ಮತ್ತು ನಾನು ಆತನನ್ನು ಪರೀಕ್ಷಿಸಿ ನಿಪಿ-7 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.**

**ಪಿರಿಯಾಪಟ್ಟಣ.**